ಎನ್. ವೈದೇಹಿ, ಮೈಸೂರು

◆ ಫೇಸ್‌ಬುಕ್‌ಗೂ, ಟೆಕ್ಸ್ಟ್‌ಬುಕ್‌ಗೂ ಇರುವ ವ್ಯತ್ಯಾಸವೇನು?



ಅಂತರಂಗದ ವೃದ್ಧಿಗೆ ಟೆಕ್ಸ್ಟ್‌ಬುಕ್ಕು; ಬಹಿರಂಗದ ಸುದ್ದಿಗೆ ಫೇಸ್‌ಬುಕ್ಕು.

ಪಿ. ಚಿದಾನಂದ, ಜವನಗೊಂಡನಹಳ್ಳಿ

◆ ರಾಜಕೀಯ ಮತ್ತು ಭ್ರಷ್ಟಾಚಾರಗಳೆರಡೂ ಒಂದೇ ನಾಣ್ಯದ ಎರಡು ಮುಖಗಳಲ್ಲವೆ?

ಹುಷ್! ನಾಣ್ಯ ಎಂದರೆ ಕೂಡಲೆ ಚಾಚಿದ ಕೈ ಹೊರಬಂದೀತು. ಬೇರೆ ಹೋಲಿಕೆ ಬಳಸಿ.

ಎಂ.ಎ. ಕುಮಾರ್, ಬೆಂಗಳೂರು

◆ ಕೈಗಡಿಯಾರ ಕಟ್ಟಿದವರೆಲ್ಲಾ ಸಮಯ ಪರಿಪಾಲನೆ ಮಾಡುತ್ತಾರಾ?



ತಾಳಿ ಕಟ್ಟಿದವರೆಲ್ಲ ತಮ್ಮ ಸತಿಯರಿಗೆ ನಿಯತ್ತಾಗಿರಲು ಆರಂಭಿಸಿದಾಗ ಇದೂ ಸಾಧ್ಯವಂತೆ.

ಬಾಲಕ, ಬೀದರ್

◆ ಪ್ರಜಾರಾಜರನ್ನು ಕೇವಲ ಕಳ್ಳತನಕ್ಕೆಂದೇ ಆರಿಸಿಕೊಟ್ಟಂತಾಗುತ್ತಿದೆ. ಭಾರತ ಸ್ವಾತಂತ್ರ್ಯ ಗಳಿಸಿದ್ದು ಯಾವ ಉದ್ದೇಶಕ್ಕಾಗಿ?

ನೀವೂ ಸರಿಯೇ! ದೇಶವನ್ನೇ ಮರೆತವರಿಗೆ ಉದ್ದೇಶ ನೆನಪಿರಲು ಸಾಧ್ಯವೇ?

ವಿಜಯ ಬಿದರಹಳ್ಳಿ, ಹಿರೇಹಡಗಲಿ

◆ ವಾಗ್ವಾದ ಮತ್ತು ಚರ್ಚೆಗೆ ಇರುವ ವ್ಯತ್ಯಾಸವೇನು?

ತರ್ಕಬದ್ಧವಾದರೆ ಚರ್ಚೆ; ತಕರಾರುಬದ್ಧವಾದರೆ ವಾಗ್ವಾದ.

ಜಾಕೋಬ್ ಡಿಸೋಜ ಕುರುವಳ್ಳಿ

◆ ಕುಡಿಯುವುದನ್ನು ಕಡಿದರೂ ಬಿಡುವುದಿಲ್ಲ ಎನ್ನುವವರಿಗೆ ನಿಮ್ಮ ಕಿವಿಮಾತು?

ಒಳ್ಳೆಯ ಮೊತ್ತಕ್ಕೆ ಲೈಫ್ ಇನ್ಶೂರೆನ್ಸ್ ಮಾಡಿಸಿಬಿಡಿ. ಮನೆಯವರಿಗೆ ಶೀಘ್ರವೇ ಒಳಿತಾಗಲಿ.

ಶ್ರೀನಿವಾಸ ಪದಕಿ, ಮುಂಬಯಿ

◆ ಖಾಕಿ, ಖಾದಿ, ಕಾವಿ. ಇವರಲ್ಲಿ ಯಾರು ಶ್ರೇಷ್ಠರು ಸಾರ್?

ಹ್ಹ! ಶ್ರೇಷ್ಠತೆ ಇರುವುದು ಅರಿವೆಯಲ್ಲಲ್ಲ, ಅರಿವಿನಲ್ಲಿ.

ರವಿ ಎಂ. ಪೈ, ಹೊನ್ನಾವರ

◆ ಹಣ ಮತ್ತು ಗುಣಗಳಲ್ಲಿ ಯಾವುದು ಮೇಲು?

ಗುಣವೇ; ಹಣ ಆಗಬೇಕಂತೆ ದ್ವಿಗುಣ... ತ್ರಿಗುಣ....

ಬೂಕನಕೆರೆ ವಿಜೇಂದ್ರ, ಮೈಸೂರು

◆ ಕೆಲವರು ಮುಂದಿನ ಸಾವಿರ ವರ್ಷಗಳಿಗಾಗುವಷ್ಟು ಆಸ್ತಿ ಮಾಡುತ್ತಾರಲ್ಲಾ...?

ಚಿಂತಿಸಬೇಡಿ. ಮುಂದಿನ ಮೂರೇ ತಲೆಮಾರಿಗೆ ಅದನ್ನು ಕರಗಿಸುವ ಬುದ್ಧಿ, ಸಾಮರ್ಥ್ಯ ಇರುತ್ತದೆ.

ಭಾರತಿ ಮಾನಗೆ, ಹೊನ್ನಾವರ

◆ ಅಜ್ಜಿ ಕಥೆಯಂತೆ; ಅಜ್ಜನ ಕಥೆ ಏಕಿಲ್ಲ?

ಅಜ್ಜ ಮನೆಗೆ ತಡವಾಗಿ ಬಂದಾಗಲೆಲ್ಲ ಕಥೆ ಹೇಳೀ ಹೇಳೀ ಸ್ಟಾಕ್ ಖಾಲಿ ಆಗಿದೆಯಂತೆ.

ಸುಂದರ್, ಬೆಂಗಳೂರು

◆ ವ (ಕಾಲ) ಮತ್ತು ಜಾವಾ (ತಂತ್ರಜ್ಞಾನ) ಇವುಗಳಿಗೆ ಲಿಂಕ್ ಇದೆಯೆ?

ಇದೆಯಲ್ಲ. ಜಾವಾ ಕಲಿತವರು ಮನೆ ಸೇರುವುದೇ ಬೆಳಗಿನ ಝಾವ.

ಮೇಟಿ ಕೊಟ್ರಪ್ಪ, ಬಸರಕೋಡು

◆ ಕಾವಿ, ಕಾಮಿ; ವ್ಯತ್ಯಾಸವೇನು?

why ಭೋಗ ಎಂದರೆ ಕಾವಿ; ವೈಭೋಗ ಎಂದರೆ ಕಾಮಿ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ರಾಜಕೀಯ ನಾಯಕರು ಬರ್ಮುಡಾ ಹಾಕಿಕೊಳ್ಳಬೇಕು ಎಂಬ ಕಾನೂನು ಬಂದರೆ?

ಬರ್ಮುಡಾದ ರಾಜಧಾನಿ ಹ್ಯಾಮಿಲ್ಟನ್‌ದೇ ಆಗಬೇಕೆನ್ನುತ್ತಾರೆ ಒಂದು ಬರ್ಮುಡಾಗೆ 1000 ಡಾಲರ್ ಬೀಳುತ್ತದೆ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ

◆ ಕಣ್ಣು ಎರಡು; ಬಾಯಿ ಒಂದು. ಏನು ಇದರ ಅರ್ಥ?

ಒಂದು ಮಾತನ್ನು ಆಡಬೇಕಾದರೆ ಅದರ ಎರಡರಷ್ಟನ್ನು ಗಮನಿಸು ಎಂದು.

ಕೆ.ಎಂ. ಲಿಂಗರಾಜು, ನಂಜನಗೂಡು

◆ ದಂಪತಿಗೂ, ದಳಪತಿಗೂ ಸಾಮ್ಯವೇನು?

ಎರಡೂ ಕಡೆ ಗೃಹಮಂತ್ರಿ ಹೇಳಿದಂತೆಯೇ ನಡೆಯಬೇಕು.

ರಾಜೀವ್ ಎನ್. ಮಾಗಲ್, ಸಕಲೇಶಪುರ

◆ ಪಾರಿವಾಳಗಳು ಹಾಕಿದ ಕಾಳೆಲ್ಲ ವ್ಯರ್ಥ ಮಾಡದೆ ತಿನ್ನುತ್ತವೆ. ಮನುಷ್ಯ ತಿನ್ನುವಾಗ ತಟ್ಟೆಯ ಸುತ್ತ ಚೆಲ್ಲುತ್ತಾನಲ್ಲ...?



ಅದಕ್ಕೆ ಹಾಕುವಂತೆಯೇ ಇವನಿಗೂ ಅರೆಹೊಟ್ಟೆ ಹಾಕಿ. ಪಾರಿವಾಳದ್ದೂ ಕಿತ್ತುಕೊಂಡು ಚೆಲ್ಲದೆ ತಿನ್ನುತ್ತಾನೆ.

ಹರಿತಸ, ಬೆಂಗಳೂರು

◆ ಗಂಡಸರು ಸಾಮಾನ್ಯವಾಗಿ ಪ್ರಶ್ನಿಸದೆ ವಿಧೇಯವಾಗಿ ಮಹಿಳೆಯರ ಮಾತನ್ನು ಕೇಳುವುದು ಯಾವಾಗ?

'ನನ್ನನ್ನ ವಿಮೆನ್ಸ್ ಕಾಲೇಜ್ ಮುಂದೆ ಡ್ರಾಪ್ ಮಾಡಿ ಸ್ವಲ್ಪ ವೇಯ್ಟ್ ಮಾಡ್ತಿ' ಎಂದಾಗ.

■ ರಾಮ್